# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 341
ಸದಸ್ಯರ ಹೆಸರು : ಶ್ರೀ ಎಂ. ನಾಗರಾಜು
ಉತ್ತರಿಸುವ ಸಚಿವರು : ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು
ಉತ್ತರಿಸುವ ದಿನಾಂಕ : 13.08.2025

<table>
<tr><th>ಕ್ರ.ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr>
<td>ಅ.</td>
<td>ಕಂಟ್ರೋಲರ್ ಮತ್ತು ಆಡಿಟರ್ ಜನರಲ್‌ರವರು 2024ರಲ್ಲಿ ಸಲ್ಲಿಸಲಾದ ವರದಿಯಂತೆ ಬಿಎಸ್-3 ಮತ್ತು ಬಿಎಸ್-4 ರ ಬಸ್ಸುಗಳನ್ನು ಸ್ಕ್ರ್ಯಾಪ್ ಮಾಡಿ ವಿದ್ಯುತ್ ಚಾಲಿತ ವಾಹನಗಳನ್ನು ಬೆಂಗಳೂರಿನಲ್ಲಿ ಪರಿಚಯಿಸಲು ರಾಷ್ಟ್ರೀಯ ಹಸಿರು ಮಂಡಳಿಯೊಂದಿಗೆ ಒಪ್ಪಂದ (commitment) ಮಾಡಿಕೊಂಡಿದ್ದು, ಅದರಂತೆ ಎಷ್ಟು ಬಸ್ಸುಗಳನ್ನು ಸ್ಕ್ರ್ಯಾಪ್ ಮಾಡಲಾಗಿದೆ; ಸ್ಕ್ರ್ಯಾಪ್ ಮಾಡಲು ಅನುಸರಿಸುತ್ತಿರುವ ನೀತಿಗಳೇನು; ಮತ್ತು ಎಷ್ಟು ವಿದ್ಯುತ್ ಚಾಲಿತ ವಾಹನಗಳನ್ನು ಬೆಂಗಳೂರಿನಲ್ಲಿ ಪರಿಚಯಿಸಲಾಗಿದೆ;</td>
<td>
2024-25ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಹಾಗೂ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಈ ಕೆಳಕಂಡಂತೆ ಬಸ್‌ಗಳನ್ನು ನಿಷ್ಕ್ರಿಯಗೊಳಿಸಲಾಗಿದ್ದು, ಮುಂಬರುವ ವರ್ಷಗಳಲ್ಲಿ ಉಳಿದೆಲ್ಲಾ ಬಿ.ಎಸ್-3 ಹಾಗೂ ಬಿಎಸ್-4 ವಾಹನಗಳನ್ನು ಹಂತ ಹಂತವಾಗಿ ನಿಷ್ಕ್ರಿಯಗೊಳಿಸಲಾಗುವುದು.
<table>
<tr><th>ಸಂಸ್ಥೆ</th><th>ಬಸ್ ಮಾದರಿ</th><th>ನಿಷ್ಕ್ರಿಯಗೊಳಿಸಲಾಗಿರುವ ಸಂಖ್ಯೆ</th></tr>
<tr><td>ಕ.ರಾ.ರ.ಸಾ.ನಿಗಮ</td><td>ಬಿ.ಎಸ್.-3</td><td>285</td></tr>
<tr><td rowspan="2">ಬೆಂ.ಮ.ಸಾ.ಸಂಸ್ಥೆ</td><td>ಬಿ.ಎಸ್.-3</td><td>712</td></tr>
<tr><td>ಬಿ.ಎಸ್.-4</td><td>27</td></tr>
<tr><td colspan="2">ಒಟ್ಟು</td><td>1024</td></tr>
</table>
ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ಬಸ್‌ಗಳನ್ನು ಸ್ಕ್ರ್ಯಾಪ್ ಮಾಡಲು ಈ ಕೆಳಕಂಡಂತೆ ನೀತಿಗಳನ್ನು ಅನುಸರಿಸಲಾಗುತ್ತಿದೆ:-
<table>
<tr><th>ವಾಹನ ತಯಾರಿಕೆ/ ಮಾದರಿ</th><th>ನಿಗದಿಪಡಿಸಲಾಗಿದ್ದ ಕಿ.ಮೀ(ಲಕ್ಷಗಳಲ್ಲಿ)</th><th>ಪರಿಷ್ಕರಿಸಿ, ನಿಗಧಿಪಡಿಸಿರುವ ಕಿ.ಮೀ/ವರ್ಷ</th></tr>
<tr><td>ಲೇಲ್ಯಾಂಡ್, ಟಾಟ, ಐಷರ್ ಮತ್ತು ಇನ್ನಿತರೆ ತಯಾರಿಕೆಯ ಕ.ಸಾರಿಗೆ, ರಾಜಹಂಸ/ ವೈಭವ, ನಾನ್ ಎ.ಸಿ ಸ್ಲೀಪರ್ ವಾಹನಗಳು (ಮಿಡಿ ಗ್ರಾಮಾಂತರ ಸಾರಿಗೆ ಮತ್ತು ದ್ವಿದ್ವಾರ ನಗರ ಸಾರಿಗೆ ಹೊರತುಪಡಿಸಿ)</td><td>9.00</td><td>11.00 ಲಕ್ಷ.ಕಿ.ಮೀ ಅಥವಾ 15 ವರ್ಷ</td></tr>
<tr><td>ಲೇಲ್ಯಾಂಡ್, ಟಾಟಾ, ಐಷರ್ ಮತ್ತು ಇನ್ನಿತರೆ ತಯಾರಿಕೆಯ ಮಿಡಿ, ಗ್ರಾಮಾಂತರ ಸಾರಿಗೆ ದ್ವಿದ್ವಾರ ನಗರ ಸಾರಿಗೆ ಹಾಗೂ ಎಲ್ಲಾ ಇಲಾಖಾ ವಾಹನಗಳು (ಕಾರು/ ಜೀಪು ಹೊರತುಪಡಿಸಿ)</td><td>9.00</td><td>9.00 ಲಕ್ಷ ಕಿ.ಮೀ ಅಥವಾ15 ವರ್ಷ</td></tr>
<tr><td>ವೋಲ್ವೋ ನಗರ ಸಾರಿಗೆ ವಾಹನಗಳು</td><td>13.00</td><td>13.00 ಲಕ್ಷ ಕಿ.ಮೀ ಅಥವಾ 15 ವರ್ಷ</td></tr>
<tr><td>ವೋಲ್ವೋ ಸೀಟರ್ ಮತ್ತು ಸ್ಲೀಪರ್ ವಾಹನಗಳು</td><td>13.00</td><td>15.00 ಲಕ್ಷ ಕಿ.ಮೀ ಅಥವಾ 15 ವರ್ಷ</td></tr>
<tr><td>ಮರ್ಸಿಡೀಸ್ ಬೆಂಜ್ ಸೀಟರ್ ವಾಹನಗಳು</td><td>13.00</td><td>13.00 ಲಕ್ಷ ಕಿ.ಮೀ ಅಥವಾ 15 ವರ್ಷ</td></tr>
<tr><td>ಸ್ಕ್ಯಾನಿಯ ಸೀಟರ್ ವಾಹನಗಳು</td><td>13.00</td><td>13.00 ಲಕ್ಷ ಕಿ.ಮೀ ಅಥವಾ 15 ವರ್ಷ</td></tr>
<tr><td>ಕರೋನಾ ಎ.ಸಿ ಮತ್ತು ನಾನ್ ಎ.ಸಿ ಸ್ಲೀಪರ್ ವಾಹನಗಳು</td><td>11.00</td><td>13.00 ಲಕ್ಷ ಕಿ.ಮೀ ಅಥವಾ 15 ವರ್ಷ</td></tr>
</table>
ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ 9.0 ಲಕ್ಷ ಕಿ.ಮೀ.ಗಳು ಅಥವಾ 14 ವರ್ಷಗಳ ವಯೋಮಿತಿ (ಇವುಗಳಲ್ಲಿ ಯಾವುದು ಮೊದಲು ಅದರ ಆಧಾರದ ಮೇಲೆ) ಪೂರೈಸಿರುವ ಸಾಮಾನ್ಯ ವಾಹನಗಳನ್ನು, ಅವುಗಳ ಭೌತಿಕ ಹಾಗೂ ತಾಂತ್ರಿಕ ಸ್ಥಿತಿ, ಕವಚ ಮತ್ತು ಅಡಿಗಟ್ಟಿನ ಸ್ಥಿತಿಯನ್ನು ಆಧಾರಿಸಿ ಹಾಗೂ 10.0 ಲಕ್ಷ ಕಿ.ಮೀ.ಗಳು ಅಥವಾ
</td>
</tr>
</table>

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| | | 15 ವರ್ಷಗಳ ವಯೋಮಿತಿ (ಇವುಗಳಲ್ಲಿ ಯಾವುದು ಮೊದಲು ಅದರ ಆಧಾರದ ಮೇಲೆ) ಪೂರೈಸಿರುವ ವೋಲ್ವೋ ಮತ್ತು ಕರೋನಾ ಸಮಾನ ಮಾದರಿಯ ಹವಾನಿಯಂತ್ರಿತ ವಾಹನಗಳನ್ನು ಅವುಗಳ ಸವಕಳಿ ಪೂರ್ಣಗೊಂಡಿರುವುದನ್ನು ಖಚಿತಪಡಿಸಿಕೊಂಡು ನಿಷ್ಕ್ರಿಯಗೊಳಿಸಲಾಗುತ್ತದೆ.<br><br>ಮುಂದುವರೆದು, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದಲ್ಲಿ ಒಟ್ಟು-50 ಹಾಗೂ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಿಂದ ಪ್ರಸ್ತುತ 1510 ಒಟ್ಟು 1560 ವಿದ್ಯುತ್ ಚಾಲಿತ ಬಸ್ಸುಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದೆ. |
| ಆ. | ಬಿ.ಎಂ.ಟಿ.ಸಿ.ಸಂಸ್ಥೆಯಲ್ಲಿ ಮತ್ತು ಸಾರಿಗೆ ಇಲಾಖೆಯ ವ್ಯಾಪ್ತಿಯ ಇತರೆ ಸಂಸ್ಥೆಯಲ್ಲಿ ಪರಿಸರ ನೀತಿ ಅನುಸರಿಸಲಾಗುತ್ತಿದೆಯೇ; | **ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ** ವ್ಯಾಪ್ತಿಯಲ್ಲಿ ಪರಿಸರ ನೀತಿ ಅನುಸಾರ ಒಟ್ಟು- 1168 ಬಿಎಸ್-6 ವಾಹನಗಳು ಹಾಗೂ 50 ವಿದ್ಯುತ್ ಚಾಲಿತ ಬಸ್ಸುಗಳನ್ನು ಕಾರ್ಯಾಚರಣೆಗೊಳಸಲಾಗುತ್ತಿದೆ ಹಾಗೂ PMe BUS SEWA ರಡಿಯಲ್ಲಿ ಸಂಸ್ಥೆಗೆ 350 ಇಲೆಕ್ಟ್ರಿಕ್ ವಾಹನಗಳು ಮಂಜೂರಾಗಿದ್ದು, ಅಳವಡಿಸಿಕೊಳ್ಳುವ ಯೋಜನೆ ಪ್ರಗತಿಯಲ್ಲಿರುತ್ತದೆ.<br><br>**ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ** ಪರಿಸರ ನೀತಿ ಅನುಸಾರ 1643 ಬಿ.ಎಸ್.-6 ಬಸ್‌ಗಳನ್ನು ಹಾಗೂ 1510 ವಿದ್ಯುತ್ ಚಾಲಿತ ಬಸ್‌ಗಳನ್ನು ಆಚರಣೆ ಮಾಡಲಾಗುತ್ತಿದೆ ಹಾಗೂ ಸಂಸ್ಥೆಯು PM e-drive ಯೋಜನೆಯಡಿ 4500 ಬಸ್ಸುಗಳು ಮಂಜೂರಾಗಿದ್ದು, ಅಳವಡಿಸಿಕೊಳ್ಳುವ ಯೋಜನೆ ಪ್ರಗತಿಯಲ್ಲಿರುತ್ತದೆ.<br><br>**ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯಲ್ಲಿ** ಪರಿಸರ ಮಾಲಿನ್ಯ ತಡೆಗಟ್ಟಲು ಹಾಗೂ ಸಾರ್ವಜನಿಕರಿಗೆ ಸುಲಭಸಾಧ್ಯ ನಗರ ಸಂಚಾರ ವ್ಯವಸ್ಥೆಗೊಳಿಸಲು ಮೊದಲ ಹಂತದಲ್ಲಿ ಸ್ಮಾರ್ಟ ಸಿಟಿ ಯೋಜನೆಯ PMe BUS SEWA ರಡಿಯಲ್ಲಿ ಸಂಸ್ಥೆಯ ಬೆಳಗಾವಿ & ಹುಬ್ಬಳ್ಳಿ-ಧಾರವಾಡ ಪ್ರತಿ ನಗರಕ್ಕೆ 100 ವಾಹನಗಳಂತೆ 200 ಇಲೆಕ್ಟ್ರಿಕ್ ವಾಹನಗಳು ಮಂಜೂರಾಗಿದ್ದು, ಅದರಂತೆ ಅಳವಡಿಸಿಕೊಳ್ಳುವ ಯೋಜನೆ ಪ್ರಗತಿಯಲ್ಲಿರುತ್ತದೆ.<br><br>**ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮದಲ್ಲಿ** ಪರಿಸರ ಮಾಲಿನ್ಯ ತಡೆಗಟ್ಟಲು ಹಾಗೂ ಸಾರ್ವಜನಿಕರಿಗೆ ಸುಲಭ ಸಾಧ್ಯ ನಗರ ಸಂಚಾರ ವ್ಯವಸ್ಥೆಗೊಳಿಸಲು ಮೊದಲ ಹಂತದಲ್ಲಿ PM e-bus ಸೇವಾ ರಡಿಯಲ್ಲಿ ಕ.ಕ.ರ.ಸಾ. ನಿಗಮದ ಕಲಬುರಗಿ ನಗರಕ್ಕೆ 100 ವಿಜಯಪುರ ಮತ್ತು ಬಳ್ಳಾರಿ ನಗರಗಳಿಗೆ ತಲಾ 50 ರಂತೆ ಒಟ್ಟು 200 Electrical ವಾಹನಗಳು ಮಂಜೂರು ಆಗಿದ್ದು ಅದರಂತೆ ಅಳವಡಿಸಿಕೊಳ್ಳುವ ಯೋಜನೆ ಪ್ರಗತಿಯಲ್ಲಿರುತ್ತದೆ.<br><br>ಮುಂದುವರೆದು, ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಹಾಗೂ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮಗಳಲ್ಲಿ ಸಾರಿಗೆ ಇಲಾಖೆ ನಿಯಮಾನುಗಳಾನುಸಾರ CMVR ಮತ್ತು KMVR ರಡಿಯಲ್ಲಿ ಪರಿಸರ ನೀತಿಗಳಿಗೆ ಸಂಬಂಧಿಸಿದಂತೆ ಕಾಲಕಾಲಕ್ಕೆ ಬದಲಾವಣೆಯಾಗುತ್ತಿರುವ Bharat Stage Emission Norms ನಿಬಂಧನೆಗಳಂತೆ ಬಸ್‌ಗಳನ್ನು ಅಳವಡಿಸಿಕೊಳ್ಳಲಾಗುತ್ತಿದೆ. ಅಲ್ಲದೇ ಸಾರಿಗೆ ಇಲಾಖೆ CMVR ಮತ್ತು KMVR ನಿಯಮಾನುಗಳಾನುಸಾರ ಎಲ್ಲ ಘಟಕಗಳಲ್ಲಿ ಬಸ್‌ಗಳ ಹೊಗೆ ತಪಾಸಣೆ ಕಾರ್ಯ ಕೈಗೊಳ್ಳಲಾಗುತ್ತಿದೆ ಹಾಗೂ ಸದರಿ ತಪಾಸಣೆಗೆ ಒಳಪಡಿಸಿದ Certificateಅನ್ನು ಪ್ರಾದೇಶಿಕ ಸಾರಿಗೆ ಇಲಾಖೆಯಲ್ಲಿ ವಾಹನ ನೊಂದಣಿ ಮಾಡುವಾಗ ಹಾಗೂ ರಹದಾರಿ ನವೀಕರಣ ಕೈಗೊಳ್ಳುವ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸಲಾಗುತ್ತಿದೆ. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಇ. | ಮಂಡೂರಿನ ಸರ್ವೆ ನಂ.116 ರಲ್ಲಿ 4 ಎಕರೆ 12 ಗುಂಟೆ (ರೂ.1.02 ಕೋಟಿಗೆ ಖರೀದಿಸಲಾದ ಜಮೀನು) ಜಮೀನನ್ನು ಶಾಲೆ, ಪಂಚಾಯಿತಿ ಮತ್ತು ಪಶು ವೈದ್ಯಕೀಯ ಆರೋಗ್ಯ ಕೇಂದ್ರಕ್ಕೆ ಹಾಗೂ ಬ್ಯಾಲಕೆರೆ ಗ್ರಾಮದಲ್ಲಿ ಸರ್ವೆ ನಂ.130ರಲ್ಲಿ ಬಿ.ಎಂ.ಟಿ.ಸಿ ಹೊಂದಿದ 30 ಎಕರೆ ಜಮೀನಿನಲ್ಲಿ 11 ಎಕರೆ ಜಮೀನನ್ನು ದುರ್ಬಲ ವರ್ಗದವರಿಗೆ ವಸತಿ ಕಲ್ಪಿಸಲು ಬಳಕೆ ಮಾಡುತ್ತಿರುವುದು ನಿಜವೇ: | ಬೆಂ.ಮ.ಸಾ.ಸಂಸ್ಥೆಗೆ ಮಂಡೂರು ಗ್ರಾಮದ ಸರ್ವೆ ನಂ.116ರಲ್ಲಿ ಮಂಜೂರು ಮಾಡಿರುವ 4-12 ಎ/ಗು ಜಮೀನಿನ ಪೈಕಿ ದಿನಾಂಕ:25.03.2008 ರಂದು ಭೂಮಿ ಹಸ್ತಾಂತರ ಪತ್ರ ಮೂಲಕ 1-30 ಎ/ಗು ಜಮೀನನ್ನು ಮಾತ್ರ ಹಸ್ತಾಂತರಿಸಿದ್ದು, ಹಸ್ತಾಂತರವಾಗದ ಜಾಗದಲ್ಲಿ ಪಂಚಾಯಿತಿ ಕಟ್ಟಡಗಳು ಇರುವುದಾಗಿ ತಿಳಿದುಬಂದಿರುತ್ತದೆ. ದಿನಾಂಕ:30.09.2019ರಂದು ಕಂದಾಯ ಇಲಾಖೆಯ ಭೂಮಾಪಕರು ಅಳತೆ ಕಾರ್ಯ ನಿರ್ವಹಿಸಿ ವರದಿ ಸಲ್ಲಿಸಿದ್ದು, ಸದರಿ ವರದಿಯಲ್ಲಿ ಮಂಡೂರು ಪಂಚಾಯ್ತಿಯ ವಾಣಿಜ್ಯ ಮಳಿಗೆಗಳು, ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ, ಸರ್ಕಾರಿ ಶಾಲಾ ಕಟ್ಟಡ, ಪಂಚಾಯ್ತಿ ಕಟ್ಟಡ, ಪಶು ಆರೋಗ್ಯ ಕೇಂದ್ರದ ಕಟ್ಟಡಗಳು ನಿರ್ಮಾಣ ಆಗಿರುವ ಕಾರಣ, ಬೆಂ.ಮ.ಸಾ.ಸಂಸ್ಥೆಗೆ ಸದರಿ ಸರ್ವೆ ನಂಬರ್‌ನಲ್ಲಿ ಜಮೀನು ಲಭ್ಯವಿರುವುದಿಲ್ಲ ಎಂದು ತಿಳಿಸಿರುತ್ತಾರೆ.<br><br>ಬ್ಯಾಲಕೆರೆ ಗ್ರಾಮದ ಸರ್ವೆ ನಂ.130ರಲ್ಲಿ ಬೆಂ.ಮ.ಸಾ.ಸಂಸ್ಥೆ ಹೊಂದಿದ 30-00 ಎಕರೆ ಜಮೀನಿನಲ್ಲಿ 11-00 ಎಕರೆ ಜಮೀನನ್ನು ದುರ್ಬಲ ವರ್ಗದವರಿಗೆ ವಸತಿ ಕಲ್ಪಿಸಲು ಬಳಕೆ ಮಾಡುತ್ತಿರುವ ವಿಷಯಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಸ್ತಾವನೆ/ ಮಾಹಿತಿ ಇರುವುದಿಲ್ಲ. |
| ಈ. | ಬೆಂಗಳೂರಿನ ಪಿಳ್ಳಣ್ಣ ಗಾರ್ಡನ್‌ನಲ್ಲಿ ಈ ಹಿಂದೆ 1992ರಲ್ಲಿ ಬಿ.ಡಿ.ಎ ವತಿಯಿಂದ 2467.88 ಚದರ ಮೀಟರ್ (24 ಗುಂಟೆ) ಜಾಗವನ್ನು 30 ವರ್ಷ ಅವಧಿಗೆ (23.03.1992 ರಿಂದ 22.03.2022) ಗುತ್ತಿಗೆ ಆಧಾರದ ಮೇಲ (ಸಂಪೂರ್ಣ ಗುತ್ತಿಗೆ ಮೊತ್ತವನ್ನು) ಮುಂಚಿತವಾಗಿ ಪಾವತಿಸಿಕೊಂಡು ನೀಡಲಾಗಿದ್ದು, ಸಂಸ್ಥೆಯ ಮಂಡಳಿ ಸಭೆಯ ನಿರ್ಣಯದಂತೆ ಈ ಜಾಗದ ಬದಲಿಗೆ ಬೇರ ಜಮೀನು ನೀಡಲು ಒಪ್ಪಿಕೊಳ್ಳಲಾಗಿದ್ದು, ಬಿ.ಡಿ.ಎ ವತಿಯಿಂದ ಬದಲಿ ಜಮೀನು ನೀಡಲಾಗಿದಯೇ; | ಬೆಂ.ಮ.ಸಾ.ಸಂಸ್ಥೆಯ 89ನೇ ಮಂಡಳಿ ಸಭೆ ದಿನಾಂಕ:30.06.2017ರ ನಿರ್ಣಯದಂತೆ ಬೆಂಗಳೂರಿನ ಪಿಳ್ಳಣ್ಣ ಗಾರ್ಡನ್ ನಿವೇಶನವನ್ನು ಬಿ.ಡಿ.ಎ.ಗೆ ಹಿಂದಿರುಗಿಸಿ ಪರ್ಯಾಯ ನಿವೇಶನ ಹಂಚಿಕೆ ಮಾಡಲು ಬಿ.ಡಿ.ಎ.ರವರನ್ನು ಕೋರಿದ್ದು, ಅದರಂತೆ ದಿನಾಂಕ:05.03.2018ರಂದು ಪ್ರಾಧಿಕಾರದ 2018ನೇ ಸಾಲಿನ ದ್ವಿತೀಯ ಸಭೆಯ ವಿಷಯ ಸಂಖ್ಯೆ 28/18ರಲ್ಲಿ ಮಂಡಿಸಿ, ಬದಲಿ ನಿವೇಶನ ನೀಡಲು ತೀರ್ಮಾನಿಸಲಾಗಿರುತ್ತದೆ. ಆದರೆ ಇಲ್ಲಿಯವರೆಗೂ ಈ ಕುರಿತು ಬಿ.ಡಿ.ಎ. ವತಿಯಿಂದ ಯಾವುದೇ ಕ್ರಮವಹಿಸಿರುವುದಿಲ್ಲ. |
| ಉ. | ಈ ಜಮೀನುಗಳನ್ನು ಸಂಸ್ಥೆಯ ಸುಪರ್ದಿಗೆ ಹಿಂಪಡೆಯಲು ಕೈಗೊಂಡಿರುವ ಕ್ರಮಗಳೇನು; ಮತ್ತು ಇದರಿಂದಾಗಿ ಸಂಸಂಸ್ಥೆಗೆ ಆಗಿರುವ ನಷ್ಟವೆಷ್ಟು? | ಮಂಡೂರು ಗ್ರಾಮದ ಸರ್ವೆ ನಂಬರ್ 116 ರಲ್ಲಿ 4-12 ಎ/ಗು ಜಮೀನನ್ನು ಸರ್ಕಾರಿ/ಸಾರ್ವಜನಿಕ ಉಪಯೋಗಕ್ಕಾಗಿ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 20(1)(ಸಿ) ರನ್ವಯ ದಿನಾಂಕ: 25.01.2008 ರಂದು ಬೆಂ.ಮ.ಸಾ.ಸಂಸ್ಥೆಗೆ ಮಂಜೂರು ಮಾಡಲಾಗಿರುತ್ತದೆ. ದಿನಾಂಕ: 25.03.2008 ರಂದು ಸಂಸ್ಥೆಗೆ ನೀಡಿರುವ ಭೂಮಿ ಹಸ್ತಾಂತರ ಪತ್ರ ಮತ್ತು ದಿನಾಂಕ: 30.09.2019 ರ ಸರ್ವೆ ನಕ್ಷೆ ಮತ್ತು ವರದಿಯನ್ನು ಉಲ್ಲೇಖಿಸಿ ಬದಲಿ ಜಮೀನು ಮಂಜೂರು ಮಾಡುವಂತೆ ಜಿಲ್ಲಾಧಿಕಾರಿ, ಬೆಂಗಳೂರು ನಗರ ಜಿಲ್ಲೆ ಇವರಿಗೆ ಒಟ್ಟು ಪತ್ರಗಳ ಮುಖೇನ 12 ಬಾರಿ ಕೋರಲಾಗಿದ್ದು ನಿರಂತರ ಹಿಂಬಾಲಿಕ ಕ್ರಮ ವಹಿಸಲಾಗುತ್ತಿದೆ.<br><br>ಬ್ಯಾಲಕೆರೆ ಗ್ರಾಮದ ಸರ್ವೆ ನಂಬರ್ 130 ರಲ್ಲಿ 30-00 ಎ/ಗು ಜಮೀನನ್ನು ಸಾರ್ವಜನಿಕ/ಸಾರ್ವಜನಿಕ ಬೆಳವಣಿಗೆ ಉದ್ದೇಶಗಳಿಗೆ, ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ನಿಯಮ 20(1)(ಸಿ) ರನ್ವಯ ದಿನಾಂಕ:19.03.2008 ರಂದು ಬೆಂ.ಮ.ಸಾ.ಸಂಸ್ಥೆಗೆ ಮಂಜೂರು ಮಾಡಿದ್ದು, ದಿನಾಂಕ:15.06.2008 ರಂದು ಹಸ್ತಾಂತರಿಸಲಾಗಿರುತ್ತದೆ. ದಿನಾಂಕ: |

| ಕ್ರ.ಸಂ. | ಪ್ರಶ್ನೆ | ಉತ್ತರ |
| --- | --- | --- |
| | | 22.07.2025 ರಂದು ಮಂಜೂರಿ ಜಮೀನಿನ ಅಳತೆ ಕಾರ್ಯ ನಿರ್ವಹಿಸಿದ್ದು, ಗಡಿ ಗುರುತಿಸುವುದು ಬಾಕಿ ಇರುತ್ತದೆ. ಅಳತೆ ಕಾರ್ಯ ನಿರ್ವಹಿಸಿರುವ ಸಮಯದಲ್ಲಿ ಮಂಜೂರಿ ಜಮೀನಿನ ಪೈಕಿ ಆಶ್ರಯ ಯೋಜನೆಗೆ ವಸತಿ ಕಲ್ಪಿಸಲು ಬಳಕೆ ಮಾಡಿರುವುದು ಕಂಡು ಬಂದಿರುವುದಿಲ್ಲ.<br><br>ಸಂಸ್ಥೆಯ ಕೋರಿಕೆಯಂತೆ ದಿನಾಂಕ:05.03.2018 ರಂದು ಪ್ರಾಧಿಕಾರದ 2018ನೇ ಸಾಲಿನ ದ್ವಿತೀಯ ಸಭೆಯ ವಿಷಯ ಸಂಖ್ಯೆ 28/18 ರಲ್ಲಿ ಮಂಡಿಸಿ, ಬೆಂಗಳೂರಿನ ಪಿಳ್ಳಣ್ಣ ಗಾರ್ಡನ್‌ನಲ್ಲಿ ಗುತ್ತಿಗೆ ನೀಡಲಾಗಿದ್ದ ಜಮೀನಿಗೆ ಬದಲಿ ನಿವೇಶನ ನೀಡಲು ತೀರ್ಮಾನಿಸಿದ್ದು, ಅದರಂತೆ ಕ್ರಮ ವಹಿಸಲು ದಿನಾಂಕ:11.05.2019ರಿಂದ 11.02.2025ರವರೆಗೆ ಒಟ್ಟು 13 ಬಾರಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವನ್ನು ಕೋರಲಾಗಿದ್ದರೂ ಇದುವರೆಗೂ ಯಾವುದೇ ಕ್ರಮ ವಹಿಸಿರುವುದಿಲ್ಲ. |

ಸಂಖ್ಯೆ: ಟಿಡಿ 149 ಟಿಸಿಕ್ಯೂ 2025

(ರಾಮಲಿಂಗಾರೆಡ್ಡಿ)
ಸಾರಿಗೆ ಮತ್ತು ಮುಜರಾಯಿ ಸಚಿವರು